ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 07–06–2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ತರಬೇತಿ ಕಾರ್ಯಕ್ರಮ ಉದ್ಘಾಟನೆ:<br>ಉದ್ಘಾಟಕರು:<br>ಯು.ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು<br>ಮುಖ್ಯ ಅತಿಥಿಗಳು:<br>ಶ್ರೀಮತಿ ದಿವ್ಯಪ್ರಭಾ ಗೌಡ, ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ | 08–06–2016<br>ಬುಧವಾರ<br>ಬೆಳಿಗ್ಗೆ<br>9–30 ಗಂಟೆಗೆ | ಸೆಮಿನಾರ್ ಹಾಲ್,<br>5ನೇ ಮಹಡಿ,<br>ಡಾ. ಎಂ.ವಿ. ಗೋವಿಂದ ಸ್ವಾಮಿ ಕೇಂದ್ರ,<br>ನಿಮ್ಹಾನ್ಸ್, ಬೆಂಗಳೂರು |
| 2. | ಬೆಂಗಳೂರು ನಗರ ಮತ್ತು ಸುತಮುತ್ತಲಿನ ಕೆರೆಗಳ ಒತ್ತುವರಿ ಕುರಿತ ಸದನ ಸಮಿತಿ ಸಭೆ, ನಂತರ ಹುಳಿಮಾವು ಮತ್ತು ಅರೆಕೆರೆ ಕೆರೆಗಳ ಪ್ರದೇಶಕ್ಕೆ ಭೇಟಿ. | 08–06–2016<br>ಬುಧವಾರ<br>ಬೆಳಿಗ್ಗೆ<br>11–00 ಗಂಟೆಗೆ | ಸಮ್ಮೇಳನ ಸಭಾಂಗಣ,<br>ಶಾಸಕರ ಭವನ ಕಟ್ಟಡ – 2,<br>ಬೆಂಗಳೂರು |

ನಿರ್ದೇಶಕರ ಪರವಾಗಿ

ಪತ್ರಿಕಾ ಪ್ರಕಟಣೆ

## ತರಬೇತಿ ಕಾರ್ಯಕ್ರಮ

ಬೆಂಗಳೂರು, ಜೂನ್ 7 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮವನ್ನು ರಾಜ್ಯಾದ್ಯಂತ ನಡೆಸುತ್ತಿದ್ದು ಸ್ವಯಂಸೇವಾ ಸಂಘ ಸಂಸ್ಥೆಗಳಿಗೆ ಆರ್ಥಿಕ ಸಹಾಯವನ್ನು ಮತ್ತು ಮಾರ್ಗದರ್ಶನವನ್ನು ನೀಡುತ್ತಿವೆ. ಇದಕ್ಕೆ ಪೂರಕವಾಗಿ ಮಂಡಳಿಯು ಆಗಿಂದಾಗ್ಗೆ ಕಾರ್ಯಗಾರ, ಸಮ್ಮೇಳನ ಹಾಗೂ ತರಬೇತಿಗಳು ಮುಂತಾದ ಕಾರ್ಯಕ್ರಮಗಳ ಮೂಲಕ ಮಹಿಳೆಯರ ಮತ್ತು ಮಕ್ಕಳ ವಿಚಾರಗಳ ಕುರಿತಾಗಿ ಜಾಗೃತಿಯನ್ನು ಮೂಡಿಸುತ್ತಿದೆ.

ಈ ಸಂಬಂಧವಾಗಿ ಭಾರತ ಸರ್ಕಾರವು ದೇಶದ ಎಲ್ಲಾ ಕೌಟುಂಬಿಕ ಸಲಹಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಲಹಾಗಾರರ ಹಾಗೂ ಸಂಸ್ಥೆಗಳನ್ನು ನಡೆಸುತ್ತಿರುವ ಮುಖ್ಯಸ್ಥರಿಗೆ ಮಹಿಳೆಯರ ಹಾಗೂ ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ವರದಕ್ಷಿಣೆ ಕಿರುಕುಳ ಮುಂತಾದ ತೊಂದರೆಗಳನ್ನು ಎದುರಿಸಲು ಸಮಯಕ್ಕೆ ತಕ್ಕಂತೆ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಅರಿವನ್ನು ಮೂಡಿಸಲು ಅಲ್ಲದೇ ಹೆಣ್ಣು ಮಗುವಿನ ಹಕ್ಕು, ರಕ್ಷಣೆ ಮತ್ತು ಅಭಿವೃದ್ಧಿ ಕುರಿತಾಗಿ ಸಮಾಜಕ್ಕೆ ಅರಿವನ್ನು ಮೂಡಿಸಲು ತರಬೇತಿಯನ್ನು ನೀಡುತ್ತಿದೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯು ಹಾಗೂ " ನಿಮ್ಹಾನ್ಸ್, ಬೆಂಗಳೂರು " ಇವರು ಜಂಟಿಯಾಗಿ ಬೆಳಿಗ್ಗೆ 9-00 ಗಂಟೆಗೆ ಸೆಮಿನಾರ್ ಹಾಲ್, 5ನೇ ಮಹಡಿ, ಡಾ. ಎಂ.ವಿ. ಗೋವಿಂದಸ್ವಾಮಿ ಕೇಂದ್ರ, (ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ಗೆ ಹೊಂದಿಕೊಂಡಂತೆ), ನಿಮ್ಹಾನ್ಸ್, ಬೆಂಗಳೂರು ಆವರಣದಲ್ಲಿ ಕರ್ನಾಟಕ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸುಮಾರು 50 ಸಂಸ್ಥೆಗಳ ಮುಖ್ಯಸ್ಥರಿಗೆ ಹಾಗೂ ಕೌಟುಂಬಿಕ ಸಲಹಾಗಾರರಿಗೆ ದಿನಾಂಕ: 08-06-2016 ರಿಂದ 10-06-2016 ರವರೆಗೆ ನುರಿತ ತರಬೇತಿದಾರರಿಂದ ತರಬೇತಿ ಶಿಬಿರವನ್ನು ಆಯೋಜಿಸಿದೆ.

ರಾಜ್ಯ ಸರ್ಕಾರ ಆರೋಗ್ಯ ಸಚಿವ ಯು. ಟಿ. ಖಾದರ್ ಈ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸುವರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ ಅಧ್ಯಕ್ಷರಾದ ಶ್ರೀಮತಿ ದಿವ್ಯಪ್ರಭಾಗೌಡ ಹಾಗೂ ಕರ್ನಾಟಕ ರಾಜ್ಯದ ಅಪರ ಪೊಲೀಸ್ ಮಹಾನಿರ್ದೇಶಕ ಭಾಸ್ಕರ್‌ರಾವ್ ಅತಿಥಿಗಳಾಗಿ ಪಾಲ್ಗೊಳ್ಳುವರು.

ಬಾಬು::ಜಿಪಿಆರ್

## ತಾಂಡಾ ಅಭಿವೃದ್ಧಿ ನಿಗಮದಲ್ಲಿ ನೋಂದಾಯಿಸಿಕೊಳ್ಳಿ

ಬೆಂಗಳೂರು, ಜೂನ್ 7 (ಕರ್ನಾಟಕ ವಾರ್ತೆ)

ಕರ್ನಾಟಕ ತಾಂಡಾ ಆಭಿವೃದ್ಧಿ ನಿಗಮವು ಬಂಜಾರ ಹಾಗೂ ಲಂಬಾಣಿ ಕಲಾವಿದರುಗಳ ಸೇವೆಯನ್ನು ಉಪಯೋಗಿಸಿಕೊಳ್ಳಲು, ಆ ಕೋಮುಗಳಿಗೆ ಸೇರಿದ ಕಲಾವಿದರು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ನಂ 16, ಜಿ.ಪಿ.ಆರ್. ಟವರ್, ನೆಲಮಹಡಿ ಟಾಸ್ಕರ್ ಟೌನ್, ಶಿವಾಜಿನಗರ, ಬೆಂಗಳೂರು – 560 051 ಇಲ್ಲಿಗೆ ವಿವರ ಮಾಹಿತಿ ನೀಡುವಂತೆ ಕರ್ನಾಟಕ ತಾಂಡಾ ಆಭಿವೃದ್ಧಿ ನಿಗಮದ ಅಧ್ಯಕ್ಷೆ ಶ್ರೀಮತಿ ಜಲಜಾನಾಯ್ಕ ಅವರು ತಿಳಿಸಿದ್ದಾರೆ.

ಬಾಬು::ಜಿಪಿಆರ್

## ದೇವಸ್ಥಾನದ ವಾರ್ಷಿಕೋತ್ಸವ

**<u>ಬೆಂಗಳೂರು, ಜೂನ್ 7 (ಕರ್ನಾಟಕ ವಾರ್ತೆ)</u>**

**ಬೆಂಗಳೂರು ನಗರದ ಮಹಾಲಕ್ಷ್ಮೀ ಬಡಾವಣೆಯಲ್ಲಿರುವ ಶ್ರೀ ಪ್ರಸನ್ನ, ವೀರಾಂಜನೇಯ ಸ್ವಾಮಿ ದೇವಾಲಯವು ಕರ್ನಾಟಕ ಸರ್ಕಾರದದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಹಿರಿಯ "ಘೋಷಿತ" ಸಂಸ್ಥೆಯಾಗಿರುತ್ತದೆ. ಈ ದೇವಾಲಯದಲ್ಲಿ ಜೂನ್ 14 ರಿಂದ 20 ರವರೆಗೆ 40ನೇ ವಾರ್ಷಿಕೋತ್ಸವ ಆಚರಿಸಲಾಗುತ್ತಿದೆ ಎಂದು ಮುಜರಾಯಿ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.**

**ಬಾಬು::ಜಿಪಿಆರ್**

# ಜಿಟಿಟಿಸಿ ತರಬೇತಿ

## ಡಿಪ್ಲೋಮಾ ಇನ್ ಎಲೆಕ್ಟ್ರಾನಿಕ್ಸ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**<u>ಬೆಂಗಳೂರು, ಜೂನ್ 7 (ಕರ್ನಾಟಕ ವಾರ್ತೆ)</u>**

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) ಎಸ್.ಎಸ್.ಎಲ್.ಸಿ ಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ನಾಲ್ಕು ವರ್ಷಗಳ ಅವಧಿಯ ಡಿಪ್ಲೋಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೋಮಾ ಇನ್ ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್, ಡಿಪ್ಲೋಮಾ ಇನ್ ಮೆಕಾಟ್ರಾನಿಕ್ಸ್, ಮತ್ತು ಹೆಣ್ಣು ಮಕ್ಕಳಿಗಾಗಿ ಡಿಪ್ಲೋಮಾ ಇನ್ ಎಲೆಕ್ಟ್ರಾನಿಕ್ಸ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇದಲ್ಲದೆ ITI, DIPLOMA & BE(ಮೈಕಾನಿಕಲ್ ಕ್ಷೇತ್ರದಲ್ಲಿ) ಪಾಸಾಗಿರುವ ಅಭ್ಯರ್ಥಿಗಳಿಗೆ ಉದ್ಯೋಗ ನಿಮಿತ್ತ ಅಲ್ಪಾವಧಿ ತರಬೇತಿಗಳನ್ನು ನಡೆಸಲಾಗುತ್ತಿದೆ.

ಆಸಕ್ತ ಆರ್ಹ ಅಭ್ಯರ್ಥಿಗಳು ಜಿಟಿಟಿಸಿಯ ಕಾಲೇಜಿನಲ್ಲಿ ಅರ್ಜಿಯನ್ನು ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಈ ಕೆಳಕಂಡಂತಿರುತ್ತದೆ.

- **Electronics & Mechatronics Course : 09.06.2016 : Bangalore**
- **Tool & Die Making and Precision Manufacturing Course :**

  **10.06.2016 : Bangalore, Mysore, Hassan, Gulbarga , Belgaum , Dandeli , Hospet , Hubli , Harihar , Kudalasangama, Maddur, Humnabad**

  **11.06.2016 : Kanakapura , Gundlupet , Kadur , Lingasugur , Tumkur , Kolar , Shimoga.**

  **13.06.2016 : Mangalore**

**ಬಾಬು/ಕೆಎಂ**